ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅರ್ಕಾವತಿ ಬಡಾವಣೆಯಲ್ಲಿನ ವಿವಿಧ ಕಾಮಗಾರಿಗಳಿಗೆ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು ;

ಆ) ಈ ಬಡಾವಣೆಯಲ್ಲಿ ಎಷ್ಟು ಹಂಚಿಕೆ ಮಾಡಲು ನಿರ್ಧರಿಸಲಾಗಿತ್ತು.

ಇ) ಇದಕ್ಕೆ ಸಂಬಂಧಪಟ್ಟಂತೆ ಇತ್ತೀಚಿನ ಪ್ರಗತಿ ಏನು;

ಈ) ಈ ಬಡಾವಣೆಯಲ್ಲಿ ನಿವೇಶನಕ್ಕಾಗಿ ಗುರುತಿಸಿದ್ದ ನಿವೇಶನ ರಹಿತರಿಗೆ ಕೂಡಲೇ ನಿವೇಶನಗಳನ್ನು ಈ ಬಡಾವಣೆಯಲ್ಲಿ ಅಥವಾ ಹೊಸ ಬಡಾವಣೆಯಲ್ಲಿ ಹಂಚಿಕೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಉ) ಗುರುತಿಸಿದ ನಿವೇಶನದಾರರಿಗೆ ಠೇವಣಿ ಹಣವನ್ನು ವಾಪಸ್ಸು ಮಾಡಲಾಗಿದೆಯೇ ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) –

ಅ) ರೂ.15.74 ಕೋಟಿಗಳನ್ನು ಖರ್ಚು ಮಾಡಲಾಗಿದೆ.

ಆ) 20,000 ನಿವೇಶನಗಳನ್ನು ಹಂಚಿಕೆ ಮಾಡಲು ನಿರ್ಧರಿಸಲಾಗಿತ್ತು;

ಇ) ಅರ್ಕಾವತಿ ಬಡಾವಣೆಗೆ ಸಂಬಂಧಿಸಿದಂತೆ ರಿಟ್ ಅಪೀಲು ಸಲ್ಲಿಸಿದ್ದು, ವಿಚಾರಣೆ ಯು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

ಈ) ಅರ್ಕಾವತಿ ಬಡಾವಣೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿಭಾಗೀಯ ಪೀಠದ ಮುಂದೆಬಾಕಿ ಇರುವ ಮೇಲ್ಮನವಿಯು ಇತ್ಯರ್ಥವಾದ ನಂತರ ನಿವೇಶನ ನೀಡಲು ಗುರುತಿಸಿದ 20,000 ಅರ್ಹ ಅರ್ಜಿದಾರರಿಗೆ, ನಿವೇಶನನೀಡಲು ಕ್ರಮ ಕೈಗೊಳ್ಳಲಾಗುವುದು.

ಉ) ಈವರೆಗೂ ಗುರುತಿಸಿದ ನಿವೇಶನದಾರರಿಗೆ ಠೇವಣಿ ಹಣವನ್ನು ವಾಪಸ್ಸು ಮಾಡಲಾಗಿರುವುದಿಲ್ಲ. ಆದರೆ ಈಗ ವಾಪಸ್ಸು ಮಾಡಲು ಕ್ರಮ ಕೈಗೊಳ್ಳಲಾಗುವುದು.

3559 (4538) ಶ್ರೀ ಕೃಷ್ಣಾ ಪಾಲೇಮಾರ್ ಜೆ.(ಸೂರತ್ಕಲ್) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಬಹುಮಹಡಿ ಕಟ್ಟಡಗಳಿಗೆ ಪರವಾನಿಗೆ ನೀಡುವ ಬಗ್ಗೆ ನಿಗಧಿ ಪಡಿಸಿರುವ ನಿಯಮಾವಳಿಗಳ ವಿವರಗಳೇನು ;

ಆ) ಸದರಿ ನಿಯಮಗಳಲ್ಲಿ ಅಗ್ನಿ ಶಾಮಕ ಸೇವಾ ವಿಭಾಗದಿಂದ ಎನ್.ಓ.ಸಿ. ಪಡೆದುಕೊಳ್ಳಬೇಕೆಂದು ವಿಧಿಸಿರುವ ನಿಯಮಗಳನ್ವಯ ನ್ಯಾಷನಲ್ ಬಿಲ್ಡಿಂಗ್ ಕೋಡ್ ಪ್ರಕಾರ ಅನುಸರಿಸಲು ನಿಗಧಿಪಡಿಸಿರುವ ನಿಯಮಗಳೇನು ;

ಇ) ನ್ಯಾಷನಲ್ ಬಿಲ್ಡಿಂಗ್ ಕೋಡ್‌ನಲ್ಲಿ ವಿಧಿಸಿದಂತಹ ಕಟ್ಟಡದ ಎತ್ತರ, ಸೇಟ್ ಬ್ಯಾಕ್, ರಸ್ತೆಯ ಅಗಲ, ಮುಂತಾದವುಗಳನ್ನು ಮಾನದಂಡವಾಗಿ ಪರಿಗಣಿಸಿರುವುದರಿಂದ ಯಾವುದೇ ಕಟ್ಟಡ ನಿರ್ಮಾಪಕರಿಗೂ ಎನ್.ಓ.ಸಿ. ಪಡೆಯಲು ಸಾಧ್ಯವಿಲ್ಲ ಎಂಬುದನ್ನು ಮಂಗಳೂರಿನ ಭೌಗೋಳಿಕ ಪರಿಸ್ಥಿತಿಯನ್ನು ಗಮನಿಸಿದ ಸರಕಾರಕ್ಕೆ ಮನವರಿಕೆಯಾಗಿಲ್ಲವೆ ; ಆಗಿದ್ದಲ್ಲಿ, ಇಂಥ ನಿಯಮಗಳ ರದ್ದತಿಗೆ ಸರಕಾರ ಮುಂದಾಗುವುದೆ ;

ಈ) ಮಂಗಳೂರು ಮಹಾನಗರ ಪಾಲಿಕೆಯವರು 15 ವರ್ಷಗಳ ಹಿಂದೆ ಅಗ್ನಿಶಾಮಕ ದಳದವರಿಂದ ಎನ್.ಓ.ಸಿ. ಪಡೆಯುವುದನ್ನು ರದ್ದು ಪಡಿಸಿರುವುದು ನಿಜವಲ್ಲವೇ;

ಉ) ನಿಜವಾಗಿದ್ದಲ್ಲಿ, ಈಗ ಪುನಃ ರದ್ದು ಮಾಡಿದ ನಿಯಮಗಳನ್ನು ಜಾರಿಗೆ ತರಲು ಕಾರಣಗಳೇನು ;

ಊ) ಕಟ್ಟಡ ನಿರ್ಮಾಣ ಕಾರ್ಯಗಳಿಗೆ ಅಡಚಣೆಯನ್ನು ಉಂಟು ಮಾಡಿದ ಈ ನಿಯಮವನ್ನು ರದ್ದುಪಡಿಸಿ, ಹಿಂದಿದ್ದಂತಹ ನಿಯಮಗಳನ್ನೇ ಮುಂದುವರಿಸಲು ಸರಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) –

ಅ) ಮಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ರೂಪಿಸಿದ ವಲಯ ನಿಯಮಾವಳಿಗಳ ಪ್ರಕಾರ ಬಹುಮಹಡಿ ವಾಸ್ತವ್ಯದ ಹಾಗೂ ವಾಣಿಜ್ಯ ಕಟ್ಟಡಗಳಿಗೆ ಪರವಾನಗಿ ನೀಡಲು ಅವಕಾಶ ಕಲ್ಪಿಸಲಾಗಿದೆ. ಈ ನಿಯಮಗಳ ಪ್ರಕಾರ ಬಹುಮಹಡಿ ಕಟ್ಟಡ ಅಂದರೆ ನೆಲಮಹಡಿ, ಹಾಗೂ 1ರಿಂದ 4 ನೇ ಮಹಡಿ ಹಾಗೂ ಅದಕ್ಕಿಂತ ಎತ್ತರದ ಕಟ್ಟಡಗಳಿಗೆ ಕನಿಷ್ಟ 4.5 ಮೀ. ಅಂತರ್ ಜಾಗ ಇದ್ದಲ್ಲಿ ಅನುಮತಿ ನೀಡಬಹುದಾಗಿದೆ. ಈ ರೀತಿ ಅನುಮತಿ ನೀಡಿರುವ ಸಂದರ್ಭದಲ್ಲಿ ವಲಯ

ನಿಯಮಾವಳಿಗಳ ಉಳಿದ ಇತರ ನಿಯಮಗಳನ್ನು (ಅಂದರೆ ಆಕ್ರಮಿಸಿದ ಜಾಗ, ವಿಸ್ತೀರ್ಣ, ಪ್ರಮಾಣ, ಕಟ್ಟಡದ ಎತ್ತರ, ಕಟ್ಟಡ ರೇಖೆ, ರಸ್ತೆ ಅಗಲಗೊಳಿಸುವ ಪ್ರಸ್ತಾವನೆ ಇತ್ಯಾದಿ) ಅನುಸರಿಸಲಾಗುತ್ತಿದೆ.

ಆ) ವಲಯ ನಿಯಮಗಳಲ್ಲಿ ನ್ಯಾಷನಲ್ ಬಿಲ್ಡಿಂಗ್ ಕೋಡ್ ಪ್ರಕಾರ ಅಗ್ನಿಶಾಮಕ ಇಲಾಖೆಯ ನಿಯಮದಂತೆ ಸುರಕ್ಷತಾ ಕ್ರಮ ತೆಗೆದುಕೊಳ್ಳತಕ್ಕದ್ದು ಎಂಬ ನಿಯಮ ಇರುತ್ತದೆ.

ಇ) ಇಂತಹ ಪರಿಸ್ಥಿತಿಯು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಇಲ್ಲ.

ಉ) ಬಹು ಮಹಡಿಗಳ ಕಟ್ಟಡಗಳಲ್ಲಿ ಅಗ್ನಿ ಆಕಸ್ಮಿಕಗಳು ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಮತ್ತು ಆಸ್ತಿ ಹಾನಿ, ಜೀವಹಾನಿ ಉಂಟಾಗುವುದನ್ನು ತಪ್ಪಿಸಲು ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯುವುದನ್ನು ಕಡ್ಡಾಯಪಡಿಸಲಾಗಿದೆ.

ಊ) ಉದ್ಭವಿಸುವುದಿಲ್ಲ.

3560 (4539) ಶ್ರೀ ಕೃಷ್ಣಾ ಪಾಲೇಮಾರ್ ಜೆ. (ಸೂರತ್ಕಲ್) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೂರತ್ಕಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮೀನುಗಾರಿಕಾ ಇಲಾಖೆಯ ರಸ್ತೆಗಳ ಒಟ್ಟು ಉದ್ದ ಎಷ್ಟು, ಅವುಗಳ ದುರಸ್ತಿಗಾಗಿ ಕಳೆದ ಎರಡು ವರ್ಷಗಳಲ್ಲಿ ಸರಕಾರ ಖರ್ಚು ಮಾಡಿದ ಹಣ ಎಷ್ಟು ;

ಆ) ರಾಜ್ಯದಲ್ಲಿ ಮೀನುಗಾರಿಕಾ ಇಲಾಖೆಯವರು ಹೊಂದಿರುವ ರಸ್ತೆಗಳು ಎಷ್ಟು ಮತ್ತು ಅದಕ್ಕಾಗಿ ಮೀಸಲಿಡಲಾಗುವ ಖಾಯಂ ಅನುದಾನದ ಮೊತ್ತ ಎಷ್ಟು; (ಕರಾವಳಿ ಜಿಲ್ಲೆಗಳ ತಾಲ್ಲೂಕುವಾರು ಮಾಹಿತಿ ನೀಡುವುದು);

ಇ) ಮೀನುಗಾರಿಕೆ ಇಲಾಖೆ ರಸ್ತೆಗಳನ್ನು ಸುಸ್ಥಿಯಲ್ಲಿಡಲು ಸರಕಾರದ ಸಕಾಲಿಕ ಕ್ರಮಗಳೇನು; (ಇಲಾಖೆಯ ಹೊಸ ರಸ್ತೆಗಳ ಕಾರ್ಯ ಯೋಜನೆಯ ವಿವರ ನೀಡುವುದು);

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) –

ಅ) ಸೂರತ್ಕಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ 8 ಮೀನುಗಾರಿಕಾ ಇಲಾಖೆಯ ರಸ್ತೆಗಳ ಒಟ್ಟು ಉದ್ದ 10.46 ಕಿ.ಮೀ. ಅವುಗಳ